ಕವಿತೆ



ಸುಧಾ ಆಡುಕಳ

ಕಲೆ: ಸಂತೋಷ್ ಸಸಿಹಿತ್ಲು

# ಕಡಲು

ಉಕ್ಕೇರುವ ಕಡಲ
ತುಂಬಿಕೊಳ್ಳುವ ಆಸೆ
ಕೆಲವೊಮ್ಮೆ ತೆರೆಗಳಂತೆ ಆವರಿಸಿಬಿಡುತ್ತದೆ
ನಿನ್ನ ವಿಶಾಲ ಕಣ್ಣುಗಳ
ಒಳಗಿಣುಕಿ ನೋಡುತ್ತೇನೆ
ನನ್ನ ಕಡಲು ನೀನು!

ಹಾಲು ಬೆಳುದಿಂಗಳು
ಹಾಸಿದ ದಡದಲ್ಲಿ
ಹೆಜ್ಜೆಯಿಡುವಾಸೆಯೊಮ್ಮೊಮ್ಮೆ ಪುಟಿದೇಳುತ್ತದೆ
ನಿನ್ನ ಹರವಾದ ಎದೆಯ ಮೇಲೆ
ತಲೆಯಿಟ್ಟು ಮಲಗಿ ಹಾಡುತ್ತೇನೆ
ನನ್ನ ದಡವೂ ನೀನೆ!

ಕಡಲಾಳದ ಮುತ್ತುಗಳ
ಹೆಕ್ಕಿಕೊಳ್ಳುವ ಆಸೆ
ಹತ್ತಿಕ್ಕಲಾರದಂತೆ ಮತ್ತೆ ಮತ್ತೆ ಕಾಡಿದಾಗ
ಬಿಸಿಯೇರಿದ ನಿನ್ನ ತುಟಿಗಳಿಗೆ
ಅರಳಿದ ತನುವ ತೆರೆದಿಡುವೆ
ಸಾವಿರದ ಮುತ್ತುಗಳ ಸಾಲು ಸಾಲು!

ಕಡಲೇ ಆಗಿಬಿಡುವಾಸೆ
ಬಿಡದಂತೆ ಬೆಂಬತ್ತಿ ಕಾಡುವಾಗ
ಸುಮ್ಮನೆ ನಿನ್ನ ಮಡಿಲು ಸೇರುತ್ತೇನೆ
ಹೆರಳ ಸವರುವ ನಿನ್ನ ಬೆರಳುಗಳು
ನದಿಗಳಂತೆ ಮೈತುಂಬ ಹರಿಯುವಾಗ
ಹಗೂರಕ್ಕೆ ನಾನೊಂದು ಕಡಲಾಗಿಬಿಡುತ್ತೇನೆ!

